**ಕರ್ನಾಟಕ ಸರ್ಕಾರ**

ಸಂಖ್ಯೆ:ಐಟಿಇ/01/ಇಎಪಿ/2013

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-01.
ದಿನಾಂಕ:17-04-2013.

**ಸುತ್ತೋಲೆ**

ವಿಷಯ: ತಾಂತ್ರಿಕ ಪರೀಕ್ಷಾ ಮಂಡಳಿಯ 153ನೇ ಸಭೆಯ ನಡವಳಿಗಳಲ್ಲಿ ತೆಗೆದುಕೊಂಡ ಕ್ರಮಗಳನ್ನು ಮತ್ತು ನಿರ್ಣಯಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ.

ಉಲ್ಲೇಖ:1.ಐಟಿಇ 8 ಇಪಿಎಸ್ 2012, ದಿನಾಂಕ:05-07-2012.

---

ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:05-07-2012ರ 153ನೇ ಸಭೆಯ ನಡವಳಿಗಳಲ್ಲಿ ಪರೀಕ್ಷಾ ಮಂಡಳಿಗೆ ಸಂಬಂಧಪಟ್ಟ ಕೆಲವೊಂದು ನಿರ್ಣಯಗಳನ್ನು ಮಂಡಳಿಯ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತೆಗೆದುಕೊಳ್ಳಲಾಗಿದೆ. ಟಿಪ್ಪಣಿಗಳು ಶೈಕ್ಷಣಿಕ ಹಿತದೃಷ್ಟಿಯಿಂದ ಗಮನದಲ್ಲಿಟ್ಟು ಕಾಲಕಾಲಕ್ಕೆ ಅನುಗುಣವಾಗಿ ಮಂಡಳಿಯ ಕಾರ್ಯಗಳು ಸುಗಮವಾಗಿ ನೆರವೇರಲು ಈ ಕೆಳಕಂಡ ನಿರ್ಣಯಗಳನ್ನು ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿ ಜಾರಿಗೆ ತರಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿದೆ.

| | | |
|---|---|---|
| 153.2.5 | C-03 ಪಠ್ಯಕ್ರಮದ ವಿಷಯಗಳಿಗೆ C-09 ಪಠ್ಯಕ್ರಮದ ವಿಷಯಗಳನ್ನು ಸಮಾನತೆ ನೀಡಿದಾಗ, C-09 ಪಠ್ಯಕ್ರಮದಲ್ಲಿ ಸದರಿ ವಿಷಯವನ್ನು ರೆಗ್ಯುಲರ್ ವಿದ್ಯಾರ್ಥಿಯಾಗಿ ವ್ಯಾಸಂಗ ಮಾಡಿದ ಸಂದರ್ಭದಲ್ಲಿ C-09 ಪಠ್ಯಕ್ರಮದ ವಿಷಯದಲ್ಲಿ ಪರೀಕ್ಷೆ ತೆಗೆದುಕೊಂಡು ತೇರ್ಗಡೆಯಾದ ಅಂಕಗಳನ್ನು C-03 ವಿಷಯಕ್ಕೂ ಪರಿಗಣಿಸಿ ಘೋಷಿಸುವ ಬಗ್ಗೆ. | ಸಮಾನತೆ ನೀಡಲಾದ ವಿಷಯದಲ್ಲಿ(ರೆಗ್ಯುಲರ್) ಪರೀಕ್ಷೆ ತೆಗೆದುಕೊಂಡು ಉತ್ತೀರ್ಣರಾದರೆ ಅವರು ಶುಲ್ಕ ಪಾವತಿಸಿದ ಎರಡೂ ವಿಷಯಗಳಿಗೂ ಅಂಕಗಳನ್ನು ಪರಿಗಣಿಸಲು ಸಭೆ ತೀರ್ಮಾನಿಸಿತು ಆದರೆ ಆಂತರಿಕ ಅಂಕಗಳು ಕಡಿಮೆ ಇದ್ದು ಫೇಲಾದರೇ ಆ ವಿಷಯದಲ್ಲಿ ಮತ್ತೊಮ್ಮೆ ಅನಿವಾರ್ಯವಾಗಿ ಪರೀಕ್ಷೆ ತೆಗೆದುಕೊಳ್ಳಬೇಕಾಗುತ್ತದೆ ಎಂದು ಸಭೆ ತೀರ್ಮಾನಿಸಿತು. |
| 153.2.6 | ಲ್ಯಾಟರಲ್ ಎಂಟ್ರಿ ಮೂಲಕ 3ನೇ ಸೆಮಿಸ್ಟರ್‌ಗೆ ಪ್ರವೇಶ ಪಡೆದ ಐ.ಟಿ.ಐ ವಿದ್ಯಾರ್ಥಿಗಳ ಬ್ರಿಡ್ಜ್ ಸಬ್ಜೆಕ್ಟ್‌ಗಳ ಅಂಕಪಟ್ಟಿ ಮುದ್ರಣ, ಪರೀಕ್ಷಾ ಅರ್ಹತೆ ಮತ್ತು ಕ್ಯಾರಿ ಓವರ್ ಬಗ್ಗೆ. | ಕನಿಷ್ಠ ಒಂದು ಟೆಸ್ಟ್‌ಗೂ ಹಾಜರಾಗದೇ, ಮೂರೂ ಟೆಸ್ಟ್‌ಗಳಿಗೆ ಗೈರು ಹಾಜರಾದರೆ, ಸದರಿ ವಿಷಯದಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅನರ್ಹ(Not Eligible) ಎಂದು ಪರಿಗಣಿಸುವುದು. ಬ್ರಿಡ್ಜ್ ಸಬ್ಜೆಕ್ಟ್‌ಗಳನ್ನು ಕ್ಯಾರಿ ಓವರ್‌ಗೆ ಪರಿಗಣಿಸುವಂತಿಲ್ಲ. 3ನೇ ಮತ್ತು 4ನೇ ಸೆಮಿಸ್ಟರ್‌ಗಳ ಅಂಕಪಟ್ಟಿಗಳಲ್ಲಿ ಬ್ರಿಡ್ಜ್ ಪಠ್ಯ ವಿಷಯಗಳನ್ನು ಪ್ರತ್ಯೇಕವಾಗಿ ನಮೂದಿಸಿ ಸದರಿ ಸೆಮಿಸ್ಟರ್‌ಗಳ ಫಲಿತಾಂಶಕ್ಕೆ ಪರಿಗಣಿಸದಿರಲು ಮತ್ತು ವಿದ್ಯಾರ್ಥಿಯು ಆ ವಿಷಯಗಳನ್ನು ತೇರ್ಗಡೆ ಹೊಂದಿದ ನಂತರ ಡಿಪ್ಲೋಮಾ ಪ್ರಮಾಣ ಪತ್ರ ನೀಡುವ ಸಲುವಾಗಿ ಸೂಕ್ತ ಮಾಹಿತಿಯನ್ನು ಅಂಕಪಟ್ಟಿಯಲ್ಲಿ ನಮೂದಿಸಲು ಸಭೆಯು ತೀರ್ಮಾನಿಸಿತು. |

| | | |
|---|---|---|
| 153.2.11 | ಪ್ರಿನ್ಸಿಪಾಲರಿಂದ ಬಂದ ಪತ್ರ:<br>1.ಸರ್ಕಾರಿ ಪಾಲಿಟೆಕ್ನಿಕ್, ರಾಯಚೂರು ಪ್ರಿನ್ಸಿಪಾಲರಿಂದ ಬಂದಿರುವ ಪತ್ರ.<br>"ಬ್ಲೂ ಬುಕ್‌ಗಳನ್ನು 6 ತಿಂಗಳಿಗೊಮ್ಮೆ ವಿಲೇವಾರಿ ಮಾಡಲು ಮತ್ತು ಆಂತರಿಕ ಅಂಕಗಳ ಮಸ್ತಕವನ್ನು ಖಾಯಂ ದಾಖಲೆಯಾಗಿ ಇಡುವ ಬಗ್ಗೆ. | ಬ್ಲೂ ಬುಕ್‌ಗಳನ್ನು ಮೂರು ವರ್ಷಗಳ ಕಾಲ ಸಂರಕ್ಷಿಸಿಟ್ಟು ನಂತರ ನಿಯಮಾನುಸಾರ ವಿಲೇ ಮಾಡಲು ಮತ್ತು ಆಂತರಿಕ ಅಂಕಗಳ ರಿಜಿಸ್ಟರ್ ಅನ್ನು ಖಾಯಂ ದಾಖಲೆಯಾಗಿ ಸಂರಕ್ಷಿಸಿಡಲು ಸಭೆ ತೀರ್ಮಾನಿಸಿತು. |

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ,
ಬೆಂಗಳೂರು.

18/4/13

1. ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳ ಮಾಹಿತಿಗಾಗಿ.
2. ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
3. ಉಪ ನಿರ್ದೇಶಕರು(ಪರೀಕ್ಷೆ), ತಾಂ.ಪ.ಮಂ. ಬೆಂಗಳೂರು.
4. ಸಹಾ.ನಿರ್ದೇಶಕರು(ಪರೀಕ್ಷೆ), ತಾಂ.ಪ.ಮಂ. ಬೆಂಗಳೂರು.
5. ಸಹಾ.ನಿರ್ದೇಶಕರು(ತಾಂತ್ರಿಕ), ತಾಂ.ಪ.ಮಂ. ಬೆಂಗಳೂರು.
6. ಹಿರಿಯ ತಾಂತ್ರಿಕ ಸಹಾಯಕರು(ಪರೀಕ್ಷೆ), ತಾಂ.ಪ.ಮಂ. ಬೆಂಗಳೂರು.
7. ರಿಜಿಸ್ಟ್ರಾರ್(ಪರೀಕ್ಷೆ), ತಾಂ.ಪ.ಮಂ. ಬೆಂಗಳೂರು.
8. ಅಧೀಕ್ಷಕರುಗಳು, ಆರ್‌ಡಿಎಂ ವಿಭಾಗ.
9. ಕಾರ್ಯನಿರ್ವಾಹಕರುಗಳು, ಆರ್‌ಡಿಎಂ ಎಲ್ಲಾ ವಿಭಾಗಗಳು.
10. ಇ-ಗವರ್ನೆನ್ಸ್ ವಿಭಾಗಕ್ಕೆ – (ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಬಗ್ಗೆ)
11. ಕಛೇರಿ ಪ್ರತಿ.